**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 118 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದದಂತೆ ವೆಚ್ಚ, ರಾಜ್ಯ ಸರ್ಕಾರ ಭರಿಸುತ್ತಿರುವ ಮೊತ್ತದ ನಡುವೆ ಆಗಾಧ ವ್ಯತ್ಯಾಸವಾಗಿದೆ. ಇದರಿಂದಾಗಿ ಐದು ವಿದ್ಯುತ್ ಸರಬರಾಜು ಕಂಪನಿಗಳು ತೀವ್ರ ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕಿದೆ. ಸರ್ಕಾರದಿಂದ ಪಾವತಿಯಲ್ಲಿ ಕೊರತೆಯಾಗುವ ಮೊತ್ತ ಸರಿದೂಗಿಸಿಕೊಳ್ಳಲು ಐದು ಕಂಪನಿಗಳು ಸಾಲದ ಮೊರೆ ಹೋಗಿವೆ. ಕೇಂದ್ರ ಸರ್ಕಾರಕ್ಕೆ ಒದಗಿಸಿರುವ ಮಾಹಿತಿಯಂತೆ ಎಸ್ಕಾಂಗಳ ಒಟ್ಟು ಸಾಲದ ಮೊತ್ತ 45 ಸಾವಿರ ಕೋಟಿ ರೂ. ದಾಟಿದೆ. ಈ ಪೈಕಿ ಬೆಸ್ಕಾಂ ಅತ್ಯಧಿಕ 19,029 ಕೋಟಿ ರೂ. ಋಣಭಾರ ಹೊತ್ತಿದೆ. ಕೆಪಿಸಿಎಲ್ ಗೆ ಬರಬೇಕಾದ ಬಾಕಿ ಮೊತ್ತ 19 ಸಾವಿರ ಕೋಟಿ ರೂ. ಇದೆ, ಸಿಬ್ಬಂದಿಗೆ ಪರಿಷ್ಕೃತ ವೇತನ ಪಾವತಿಗೆ ಕೆಪಿಟಿಸಿಎಲ್ ಒತ್ತಡಕ್ಕೆ ಸಿಲುಕಿದ್ದು, ಇದರ ಹೊರೆಯನ್ನು ಗ್ರಾಹಕರ ಮೇಲೆ ಹಾಕುವ ಚಟುವಟಿಕೆಗಳು ನಡೆಯುತ್ತಿರುವ ಸೂಚನೆಗಳು ಕಂಡುಬರುತ್ತಿದೆ. ಈ ವಿಷಯವು ಸಾರ್ವಜನಿಕರ ಹಿತದೃಷ್ಟಿಯಿಂದ ಈ ವಿಷಯದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

* * * * *

**ಉತ್ತರ**:

1. ಐದು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸರ್ಕಾರದ ವತಿಯಿಂದ ಸಹಾಯಧನ ಕಾಲಕಾಲಕ್ಕೆ ಹಾಗೂ ನಿಯಮಿತವಾಗಿ ಬಿಡುಗಡೆಯಾಗುತ್ತಿದೆ. ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ಪೂರೈಕೆ ವಿಶ್ವಾಸಾರ್ಹತೆಯಲ್ಲಿ ರಾಜಿ ಮಾಡಿಕೊಳ್ಳದೆ, ನಿಯಂತ್ರಕ ಚೌಕಟ್ಟಿನ ಅಂತರ್ಗತದಲ್ಲಿ ಕಾರ್ಯನಿರ್ವಹಿಸುತ್ತವೆ., ಸದರಿ ಪರಿಣಾಮವಾಗಿ, ಚಾಲ್ತಿ ಬಂಡವಾಳದ ಅಗತ್ಯತೆಗಳನ್ನು ಪೂರೈಸಲು ಹಾಗೂ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಗೆ ಅಗತ್ಯವಾದ ಬಂಡವಾಳ ವೆಚ್ಚಕ್ಕಾಗಿ ಸಾಲ ಸಂಪನ್ಮೂಲಗಳ ಮೇಲೆ ಅವಲಂಬನೆ ಅನಿವಾರ್ಯವಾಗುತ್ತದೆ. ಸದರಿ ಆರ್ಥಿಕ ವ್ಯವಸ್ಥೆಯಿಂದ ನಿರಂತರ ಮತ್ತು ವಿಶ್ವಾಸಾರ್ಹ ವಿದ್ಯುತ್‌ಪೂರೈಕೆ ಸಾಧ್ಯವಾಗಿಸುತ್ತದೆ. ವಿದ್ಯುತ್ ಖರೀದಿ ಮೊತ್ತವು ಅನಿಯಂತ್ರಿತ ವೆಚ್ಚವಾಗಿದ್ದು, ಪ್ರತಿ ವರ್ಷ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿರುವಂತೆ ವಿದ್ಯುತ್ ಖರೀದಿ ಮೊತ್ತವು ಹೆಚ್ಚಾಗುತ್ತದೆ. ಹೆಚ್ಚುವರಿ ವಿದ್ಯುತ್ ಖರೀದಿ ಮತ್ತು ಬಂಡವಾಳ ಕಾಮಗಾರಿಗಳ ನಿರ್ವಹಣೆಗಾಗಿ ವಿದ್ಯುತ್ ಸರಬರಾಜು ಕಂಪನಿಗಳು ವಿವಿಧ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲಾಗುತ್ತಿದೆ. ವಿದ್ಯುತ್ ಸರಬರಾಜು ಕಂಪನಿಗಳ ಜನವರಿ-2026 ರ ಅಂತ್ಯದವರೆಗಿನ ಒಟ್ಟು ದೀರ್ಘಾವಧಿ ಸಾಲದ ಮೊತ್ತ ರೂ.42,750 ಕೋಟಿಗಳಾಗಿದ್ದು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಫೆಬ್ರುವರಿ-2026 ರ ಅಂತ್ಯಕ್ಕೆ ದೀರ್ಘಾವಧಿ ಸಾಲವು ರೂ. 17,556 ಕೋಟಿ ಇರುತ್ತದೆ.

2. ದಿನಾಂಕ: 02.03.2026 ಕ್ಕೆ ಕೆಪಿಸಿಎಲ್ ಗೆ ಎಸ್ಕಾಂಗಳು ಪಾವತಿಸಬೇಕಾದ ಬಾಕಿ ಮೊತ್ತವು (ಲೇಟ್ ಪೇಮೆಂಟ್ ಸರ್‌ಚಾರ್ಜ್ (LPS) ರೂ.5,277 ಕೋಟಿ ಸೇರಿದಂತೆ) ರೂ.8,755 ಕೋಟಿಗಳಾಗಿರುತ್ತದೆ. ಎಸ್ಕಾಂಗಳಿಂದ ಪಾವತಿಸಬೇಕಾದ ನಿವ್ವಳ ಬಾಕಿ (LPS ಹೊರತುಪಡಿಸಿ) ಮೊತ್ತವು ರೂ.3,478 ಕೋಟಿಗಳಾಗಿರುತ್ತದೆ.

3. ಕೆಪಿಟಿಸಿಎಲ್ ಹಾಗೂ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಯವರ ವೇತನ / ಪರಿಷ್ಕೃತ ವೇತನವನ್ನು ನಿಯತವಾಗಿ ಪಾವತಿಸಲಾಗುತ್ತಿದ್ದು, ಸದರಿ ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಕೊರತೆ ಇರುವುದಿಲ್ಲ.

ಸಂಖ್ಯೆ: ಎನರ್ಜಿ 61 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು